# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Ad.Com/YLK/0791/2019-20 ದಿನಾಂಕ: 22/9/22

ಜಂಟಿ ನಿರ್ದೇಶಕರು (ನಗರ ಯೋಜನೆ–ಉತ್ತರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಂ. C/13/22-23 ದಿನಾಂಕ. 22/9/22

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಖಾತಾ ಸಂಖ್ಯೆ: 1947/2/2, ಸರ್ವೆ ನಂ. 2/2, ಅಮೃತಹಳ್ಳಿ ಗ್ರಾಮ, ವಾರ್ಡ್ ಸಂಖ್ಯೆ: 07, ಯಲಹಂಕ ವಲಯ, ಬೆಂಗಳೂರು ರ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ಪರಿಷ್ಕೃತ ನಕ್ಷೆ ಮಂಜೂರಾತಿ ಸಂಖ್ಯೆ: BBMP/Ad.Com/YLK/0791/2019-20 ರಂತೆ ದಿನಾಂಕ: 18–01–2021

2) ತಮ್ಮ ಮನವಿ ಪತ್ರ ದಿನಾಂಕ: 06–01–2022

* * * * * * *

ಆಸ್ತಿ ಖಾತಾ ಸಂಖ್ಯೆ: 1947/2/2, ಸರ್ವೆ ನಂ. 2/2, ಅಮೃತಹಳ್ಳಿ ಗ್ರಾಮ, ವಾರ್ಡ್ ಸಂಖ್ಯೆ: 07, ಯಲಹಂಕ ವಲಯ, ಬೆಂಗಳೂರು ರ ಸ್ವತ್ತಿನಲ್ಲಿ 2ತಳ + ನೆಲ + ಮೇಲಿನ 7 ಅಂತಸ್ತುಗಳ ವಾಣಿಜ್ಯ ಕಟ್ಟಡ ನಿರ್ಮಿಸಲು ಈ ಕಛೇರಿಯಿಂದ ಉಲ್ಲೇಖ (1) ರಂತೆ ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಪ್ರಸ್ತುತ ವಾಣಿಜ್ಯ ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಿಸುತ್ತಿರುವುದನ್ನು ಪರಿವೀಕ್ಷಿಸಲಾಗಿದೆ.

ಅಪರ ನಿರ್ದೇಶಕರು ನಗರ ಯೋಜನೆ ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 17-02–2022 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಸಂಬಂಧ ಶುಲ್ಕ ರೂ. 5,08,000/– ಗಳನ್ನು ಮತ್ತು ಕಾರ್ಮಿಕ ಕಲ್ಯಾಣ ನಿಧಿ ಶುಲ್ಕ ರೂ. 13,62,000/–, ನಕ್ಷೆ ಮಂಜೂರಾತಿ ಸಮಯದಲ್ಲಿ ಉಳಿಸಿಕೊಂಡಿದ್ದ ಬಾಕಿ ಮೊತ್ತ ರೂ.61,38,000/– ಗಳನ್ನು ಪಾವತಿಸುವಂತೆ ದಿನಾಂಕ: 22–02–2022 ರಂದು ಶುಲ್ಕ ಪಾವತಿ ತಿಳುವಳಿಕೆ ಪತ್ರ ಜಾರಿ ಮಾಡಲಾಗಿತ್ತು. ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 9237/2022 (ಎಲ್‌ಬಿ–ಬಿಎಂಪಿ) ಗೆ ದಿನಾಂಕ: 05–05–2022 ರ ಮಧ್ಯಂತರ ಆದೇಶದನ್ವಯ ರೂ. ៦,82,000/– ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms331-TP/000075 ದಿನಾಂಕ: 20–09–2022 ರಂದು ಸಂದಾಯ ಮಾಡಿರುವುದರಿಂದ, ಸದರಿ ವಾಣಿಜ್ಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ಮಂಜೂರಾತಿಯ ಸಿಂಧುತ್ವವು ಉಲ್ಲೇಖ (2) ರಂತೆ ಅನುಮೋದನೆ ನೀಡಿದ ದಿನಾಂಕದಿಂದ ೫ ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.
4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ–ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
5. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ

ಹೊಣೆಯಾಗಿರುತ್ತಾರೆ ತಪ್ಪಿದ್ದಲ್ಲಿ ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.

6. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ದವಾಗಿರತಕ್ಕದ್ದು.
7. ಕಟ್ಟಡದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಿಸಿ ಬಳಸಿಕೊಳ್ಳುವಂತಹ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ ಅದನ್ನು ನಿರ್ವಹಿಸುವ ಮುಖಾಂತರ Zero Waste Discharge ಮಾಡಲು ಕ್ರಮಕೈಗೊಳ್ಳುವುದು.
8. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.
9. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.
10. ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವ ಸಮಯದಲ್ಲಿ ಜಕ್ಕೂರು ಹಾರಾಟ ತರಬೇತಿ ಕೇಂದ್ರದಿಂದ ಪಡೆದಿರುವ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವುದು.
11. ಬಾಕಿ ಶುಲ್ಕವನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 9237/2022 (ಎಲ್‌ಬಿ-ಬಿಎಂಪಿ) ಗೆ ದಿನಾಂಕ: 05-05-2022 ರ ಅಂತಿಮ ಆದೇಶಕ್ಕೆ ಒಪ್ಪಿ ಸಲ್ಲಿಸಿರುವ ಮುಚ್ಚಳಿಕೆ ಪತ್ರಕ್ಕೆ ಬದ್ಧರಾಗಿರತಕ್ಕದ್ದು

ಸಹಿ /-

**ಜಂಟಿ ನಿರ್ದೇಶಕರು (ನಗರ ಯೋಜನೆ -ಉತ್ತರ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಗೆ,

ಮೆ॥ ಸೂರ್ಯ ಹೈಟ್ಸ್ ನ ಪರವಾಗಿ ಪಾಲುದಾರರಾದ
ಶ್ರೀ.ಹೆಚ್.ಎಂ.ವಿಶ್ವನಾಥ್
# 684, 2nd Floor, CRC Square,
HIG 'A' Sector, Opp. to Sheshadripuram College,
Above State Bank of Hyderbad, Yelahanka New Town,
Bengaluru-560064.

**ಪ್ರತಿಯನ್ನು:**

1. ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ-ವಿಭಾಗ), ಸಹಾಯಕ ಕಾರ್ಯಪಾಲಕ ಅಭಿಯಂತರರು, (ಕೊಡಿಗೇಹಳ್ಳಿ ಉಪ-ವಿಭಾಗ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
2. ಕಛೇರಿ ಪ್ರತಿ.

ಜಂಟಿ ನಿರ್ದೇಶಕರು (ನಗರ ಯೋಜನೆ -ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ